ತುಮಕೂರು ವಿಶ್ವವಿದ್ಯಾನಿಲಯ
ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು,
ಬಿ.ಹೆಚ್. ರಸ್ತೆ, ತುಮಕೂರು. 572103 ದೂ.ಸಂ: 0816-2260220

ದಿನಾಂಕ:01.02.2021

# ಸುತ್ತೋಲೆ

ಎಲ್ಲಾ ವಿದ್ಯಾರ್ಥಿಗಳ ಗಮನಕ್ಕೆ,

2021 ರ ಮಾರ್ಚ್/ಏಪ್ರಿಲ್ ಮಾಹೆಯಲ್ಲಿ ನಡೆಯಲಿರುವ ಬಿಎಸ್ಸಿ., ಬಿ.ವೋಕ್ ಮತ್ತು ಬಿ.ಸಿ.ಎ, 1, 3 ಮತ್ತು 5ನೇ ಸೆಮಿಸ್ಟರ್ ಮತ್ತು 2015-16 ನೇ ಶೈಕ್ಷಣಿಕ ಸಾಲಿನಿಂದ ಇಲ್ಲಿಯವರೆಗೆ ಪ್ರವೇಶ ಪಡೆದಿರುವ ಎಲ್ಲಾ ಅರ್ಹ ವಿದ್ಯಾರ್ಥಿಗಳು ಪರೀಕ್ಷೆಗಳ ಪರೀಕ್ಷಾ ಶುಲ್ಕವನ್ನು (ಸಾರ್ವಜನಿಕ ರಜೆಯನ್ನು ಹೊರತು ಪಡಿಸಿ) ಈ ಕೆಳಕಂಡ ದಿನಾಂಕದೊಳಗೆ ಕಛೇರಿ ವೇಳೆಯೊಳಗೆ ಪಾವತಿಸುವುದು.

## ಪರೀಕ್ಷಾ ಶುಲ್ಕ ಪಾವತಿಸಲು ನಿಗಧಿ ಪಡಿಸಿರುವ ಅವಧಿ

1) ದಂಡ ಶುಲ್ಕ ಇಲ್ಲದೆ ದಿನಾಂಕ: 15.02.2021
2) ರೂ.100=00 ದಂಡ ಶುಲ್ಕಗೊಂದಿಗೆ ದಿನಾಂಕ: 20.02.2021

## ವಿಶೇಷ ಸೂಚನೆ:-

1. ಬಿಎಸ್ಸಿ., ಬಿ.ವೋಕ್ ಮತ್ತು ಬಿ.ಸಿ.ಎ, 1, 3 ಮತ್ತು 5ನೇ ಸೆಮಿಸ್ಟರ್ (REPEATERS) ಪರೀಕ್ಷಾ ಶುಲ್ಕ ಪಾವತಿಸುವವರು ಒಂದೇ ವರ್ಷ ನಮೂನೆ ಮತ್ತು ಒಂದೇ ಸಮಯದಲ್ಲಿ ಶುಲ್ಕ ಪಾವತಿಸಲು ಸೂಚಿಸಲಾಗಿದೆ.
2. ಪರೀಕ್ಷಾ ಶುಲ್ಕ ಕಟ್ಟಿದ ನಂತರ ಭರ್ತಿಮಾಡಿದ ಅರ್ಜಿಯನ್ನು ಕಛೇರಿಯಲ್ಲಿ ಕಡ್ಡಾಯವಾಗಿ ಹಿಂತಿರುಗಿಸತಕ್ಕದ್ದು. ಹಿಂದಿರುಗಿಸದಿದ್ದರೆ ನೀವೇ ಜವಾಬ್ದಾರರಾಗಿರುತ್ತೀರಿ.
3. ಪರೀಕ್ಷಾ ಅರ್ಜಿ ಜೊತೆ ಇತ್ತೀಚಿನ ಒಂದು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಸಲ್ಲಿಸುವುದು ಹಾಗೂ ಪರೀಕ್ಷಾ ಶುಲ್ಕ ಪಾವತಿಸುವ ಚಲನ್‌ನಲ್ಲಿ ಮತ್ತು ಭರ್ತಿಮಾಡಿದ ಅರ್ಜಿಯಲ್ಲಿ ಕಡ್ಡಾಯವಾಗಿ ಪ್ರಾಂಶುಪಾಲರ ಮತ್ತು ವಿದ್ಯಾರ್ಥಿಯ ಸಹಿ ಇರತಕ್ಕದ್ದು.
4. ಹಿಂದುಳಿದ ವರ್ಗಗಳ ಇಲಾಖೆಯ ವಿದ್ಯಾಸಿರಿ ಯೋಜನೆಯಡಿ ಶುಲ್ಕ ವಿನಾಯಿತಿಗೆ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳು ಅರ್ಹತೆ ಹೊಂದದೇ ತಿರಸ್ಕರಿಸಲ್ಪಟ್ಟಲ್ಲಿ ಅಂತಹ ವಿದ್ಯಾರ್ಥಿಗಳು ಪೂರ್ಣ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸಬೇಕಾಗುತ್ತದೆ. ತಪ್ಪು ಮಾಹಿತಿ ನೀಡಿ ಶುಲ್ಕ ವಿನಾಯಿತಿ ಪಡೆದಿದ್ದಲ್ಲಿ ನಂತರದ ದಿನಗಳಲ್ಲಿ ದಂಡ ಸಮೇತ ವಸೂಲಿ ಮಾಡಲಾಗುವುದು. ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಹೊಂದಿದ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸುವ ಸಂಧರ್ಭದಲ್ಲಿ ಕಡ್ಡಾಯವಾಗಿ ಲಗತ್ತಿಸಬೇಕು.
5. ಪರೀಕ್ಷಾ ಶುಲ್ಕ ಮತ್ತು ಅರ್ಜಿ ತುಂಬುವ ಎಲ್ಲಾ ವಿದ್ಯಾರ್ಥಿಗಳು ಕಡ್ಡಾಯವಾಗಿ ಕಾಲೇಜಿನ ಗುರುತಿನ ಪತ್ರದೊಂದಿಗೆ ಬರತಕ್ಕದ್ದು.
6. ತರಗತಿಗಳಿಗೆ ಹಾಜರಾಗದೇ ಶೇ.75 ಕ್ಕಿಂತ ಹಾಜರಾತಿ ಕೊರತೆ ಇರುವ ಹಾಗೂ ಪ್ರವೇಶಾನುಮೋದನೆ ಆಗದ ವಿದ್ಯಾರ್ಥಿಗಳು ಶುಲ್ಕ ಪಾವತಿಸುವ ಮುನ್ನ ಪ್ರಾಂಶುಪಾಲರನ್ನು ಭೇಟಿಯಾಗುವುದು.
7. ಎಸ್.ಟಿ/ಎಸ್.ಸಿ/ಸಿ-01 ವರ್ಗದವರಿಗೆ ಆದಾಯಮಿತಿ 2.50 ಲಕ್ಷ ಆದಾಯಮಿತಿ ಇತರೆ ವರ್ಗದವರಿಗೆ (2ಎ,2ಬಿ,3ಎ,3ಬಿ ಮತ್ತು ಬ್ರಾಹ್ಮಣ, ವೈಶ್ಯ ಇತ್ಯಾದಿ) ಆದಾಯ ಮಿತಿ 1.00 ಲಕ್ಷ (ಎಸ್.ಟಿ/ಎಸ್.ಸಿ/ಸಿ-01 ಹಿಂದುಳಿದ ವರ್ಗಗಳ ಇಲಾಖೆಯ ವಿದ್ಯಾಸಿರಿ ಯೋಜನೆಯಡಿ ಶುಲ್ಕ ವಿನಾಯಿತಿಗೆ ಅರ್ಜಿಯನ್ನು ಸಲ್ಲಿಸಿರುವವರಿಗೆ ಮಾತ್ರ)
8. ಮರುಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿಯಲ್ಲಿ ಮಾಹಿತಿ ನೀಡತಕ್ಕದ್ದು. ತಪ್ಪಿದಲ್ಲಿ ನೀವೇ ಜವಾಬ್ದಾರರಾಗಿರುತ್ತೀರಿ.

ಪು.ತಿ.ನೋ.

Scanned with CamScanner

2021 ರ ಮಾರ್ಚ್/ಏಪ್ರಿಲ್ ಮಾಹೆಯಲ್ಲಿ ನಡೆಯಲಿರುವ ಬಿಎಸ್ಸಿ., ಬಿ.ವೋಕ್ ಮತ್ತು ಬಿ.ಸಿ.ಎ. 1, 3 ಮತ್ತು 5ನೇ ಸೆಮಿಸ್ಟರ್‌ನ ಪರೀಕ್ಷಾ ಶುಲ್ಕದ ವಿವರ

| | | GM | | | ಶುಲ್ಕ ವಿನಾಯಿತಿ ಹಾಗೂ ವಿದ್ಯಾರ್ಥಿವೇತನಕ್ಕೆ ಅರ್ಜಿಸಲ್ಲಿಸಿರುವ OBC/SC/ST ಮತ್ತು ಇತರೆ ವಿದ್ಯಾರ್ಥಿಗಳು | | |
|---|---|---|---|---|---|---|---|
| | | I SEM | IIISEM | VSEM | I SEM | IIISEM | VSEM |
| 1 | B.Sc/BCA | 1376 | 1376 | 1576 | 376 | 376 | 576 |
| 2 | B.VOC | 1526 | 1526 | 1576 | 526 | 526 | 576 |

## REPEATERS

| SL.NO | SUBJECTS | GM/OBC(WITHOUT LAB) | SC/ST (WITH OUT LAB) |
|---|---|---|---|
| 1 | ONE SUBJECTS | 326 | 226 |
| 2 | TWO SUBJECTS | 426 | |
| 3 | THREE SUBJECTS | 526 | |
| 4 | FAILS IN PRACTICALS | ADD RS.50 PER PRACTICALS | |

ಸೂಚನೆಗಳು:

1. SC/ST/C-1 ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನದ ಮಿತಿ ರೂ.2.50 ಲಕ್ಷದೊಳಗಿದ್ದು, ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಿದ್ದಲ್ಲಿ ಮಾತ್ರ ಪರೀಕ್ಷಾ ಶುಲ್ಕ ವಿನಾಯಿತಿಗೆ ಅರ್ಹರಿರುತ್ತಾರೆ.

2. OBC ವಿದ್ಯಾರ್ಥಿಗಳು ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ 1 ಲಕ್ಷದೊಳಗಿದ್ದು, ಹಾಗೂ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಿದಲ್ಲಿ ಮಾತ್ರ ಪರೀಕ್ಷಾ ಶುಲ್ಕ ವಿನಾಯಿತಿಗೆ ಅರ್ಹರಿರುತ್ತಾರೆ.

ಪ್ರಾಂಶುಪಾಲರು

ಪ್ರಾಂಶುಪಾಲರು
ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು
ತುಮಕೂರು-572 103

Scanned with CamScanner